# ಚೆನ್ನದ ಗಣಿಯಲ್ಲಿ ಸಿಕ್ಕ ನಿಧಿ!



**‘ಮಿಸ್ ಸೂಪರ್ ನ್ಯಾಷನಲ್’ ಕಿರೀಟ ತಲೆಯ ಮೇಲೆ ಮಿನುಗುತ್ತಿರುವ ಹಾಗೆಯೇ ಮಂಗಳೂರಿನ ಬೆಡಗಿ ಶ್ರೀನಿಧಿ ಶೆಟ್ಟಿಗೆ ಚಿನ್ನದ ಗಣಿಯಲ್ಲಿ ನಿಧಿ ಸಿಕ್ಕಿದೆ. ‘ಕೆಜಿಎಫ್’ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುವ ಅವಕಾಶ, ತಮ್ಮ ಪಾಲಿಗೆ ಸಿಕ್ಕ ನಿಧಿ ಎಂದವರು ಭಾವಿಸಿದ್ದಾರೆ. ಸೌಂದರ್ಯಸ್ಪರ್ಧೆಗಳಲ್ಲಿ ಮಿಂಚುತ್ತಿದ್ದ ಅವರೀಗ ಪಂಚಭಾಷಾ ನಟಿ.**

■ **ಪದ್ಮನಾಭ ಭಟ್**

◆ **‘ಕೆಜಿಎಫ್’ನಂಥ ಬಹುಭಾಷಾ ಸಿನಿಮಾದಿಂದ ನಿಮ್ಮ ನಟನಾ ಬದುಕು ಆರಂಭ ಆಗುತ್ತದೆ ಅನಿಸಿತ್ತಾ?**

ಖಂಡಿತ ಗೊತ್ತಿರಲಿಲ್ಲ. ನಟನೆಯ ಒಲವಿತ್ತು. ಆದರೆ ಹೇಗೆ ಹೋಗುವುದು? ಯಾರನ್ನೂ ಕೇಳಬೇಕು ಏನೂ ಗೊತ್ತಿರಲಿಲ್ಲ. ರಾಷ್ಟ್ರಮಟ್ಟದ ಒಂದು ಸೌಂದರ್ಯಸ್ಪರ್ಧೆಯಲ್ಲಿ ಭಾಗವಹಿಸಬೇಕಿತ್ತು. ಭಾಗವಹಿಸಿ ಗೆದ್ದೆ. ನಂತರ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ತಯಾರಿಯಲ್ಲಿದ್ದೆ. ಆಗಲೇ ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಫೋಟೊ ನೋಡಿ ‘ಕೆಜಿಎಫ್’ ತಂಡದವರು ಭೇಟಿಯಾಗಲು ಆಹ್ವಾನ ನೀಡಿದರು. ಅವರಿಗೆ ನಾನು ಇಷ್ಟವಾದೆ.

ಆರಂಭದಲ್ಲಿ ಇದು ಒಂದು ಭಾಷೆಯ ಸಿನಿಮಾ ಅಂತಲೇ ಅಂದುಕೊಂಡಿದ್ದೆವು. ದೊಡ್ಡ ಬಜೆಟ್ ಸಿನಿಮಾ ಅಂತ ಗೊತ್ತಿತ್ತು. ಟೀಂ ತುಂಬ ಚೆನ್ನಾಗಿದೆ ಅಂತಲೂ ಗೊತ್ತಿತ್ತು. ಕಥೆ ತುಂಬ ವಿಸ್ತಾರವಾಗಿದ್ದರಿಂದ ಎರಡು ಭಾಗ ಮಾಡಿದರು. ಐದು ಭಾಷೆಗಳಲ್ಲಿ ಆಯಿತು. ಹೀಗೆ ಬೆಳೆಯುತ್ತಲೇ ಹೋಯಿತು. ಐದು ಭಾಷೆಯ ಸಿನಿಮಾದ ಮೂಲಕ ನಟನಾ ಜೀವನ ಆರಂಭಿಸುತ್ತಿರುವುದು ನನ್ನ ಅದೃಷ್ಟ.

◆ **ನಟನೆಯ ತರಬೇತಿ ಪಡೆದಿರುವಿರಾ?**

ಇಲ್ಲ. ನಾನು ತರಬೇತಿ ಪಡೆದೇ ನಟಿಸಬೇಕು ಎಂದುಕೊಂಡಿದ್ದೆ. ಆದರೆ ಸೌಂದರ್ಯಸ್ಪರ್ಧೆಯ ತಯಾರಿಯಲ್ಲಿ ಬ್ಯುಸಿ ಇದ್ದೆ. ಅದಾದ ತಕ್ಷಣ ಈ ಸಿನಿಮಾ ಶುರುವಾಯ್ತು. ನಮ್ಮ ತಂಡದಲ್ಲಿ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಹೊಸಬರು. ನಾನು ತುಸು ತಡವಾಗಿ ತಂಡಕ್ಕೆ ಸೇರ್ಪಡೆ ಆದೆ. ನನಗೂ ಒಂದು ತಿಂಗಳು ವರ್ಕ್‌ಶಾಪ್ ಮಾಡಿದರು. ಚಿತ್ರದ ಸೆಟ್ಟೇ ನನ್ನ ನಿಜವಾದ ಪಾಠಶಾಲೆ. ಅಲ್ಲಿಯೇ ಕಲಿತು, ಅಲ್ಲಿಯೇ ಪರೀಕ್ಷೆ ಎದುರಿಸಿ, ಅಲ್ಲಿಯೇ ಫಲಿತಾಂಶವೂ ಸಿಕ್ಕಿಬಿಡುತ್ತಿತ್ತು.

◆ **★ ಕೆಜಿಎಫ್‌ನಲ್ಲಿ ನಿಮ್ಮ ಪಾತ್ರ ಹೇಗಿದೆ?**

ಪ್ರಶಾಂತ್ ನೀಲ್ ತಮ್ಮ ಸಿನಿಮಾಗಳಲ್ಲಿ ಎರಡೇ ಸೆಕೆಂಡ್ ಬಂದುಹೋಗುವ ಪಾತ್ರ ಇರಲಿ, ಎರಡು ಗಂಟೆಯ ಪಾತ್ರ ಇರಲಿ, ಸಮಾನ ಮಹತ್ವ ಕೊಡುತ್ತಾರೆ. ಯಾವ ಪಾತ್ರವನ್ನೂ ನಿರ್ಲಕ್ಷಿಸುವುದಿಲ್ಲ. ಈ ಸಿನಿಮಾ ಎರಡು ಭಾಗದಲ್ಲಿದೆ. ಮೊದಲ ಪಾತ್ರದಲ್ಲಿ ಎಲ್ಲ ಪಾತ್ರಗಳನ್ನು ಪರಿಚಯ ಮಾಡಿಕೊಡಲಾಗುತ್ತದೆ. ಎರಡನೇ ಭಾಗದಲ್ಲಿ ಆ ಎಲ್ಲ ಪಾತ್ರಗಳನ್ನೂ ಮತ್ತಷ್ಟು ಆಳವಾಗಿ ದೃಶ್ಯೀಕರಿಸಲಾಗುತ್ತದೆ. ಕೆಲವು ಪಾತ್ರಗಳು ಮೊದಲ ಭಾಗದಲ್ಲಿ ಮುಖ್ಯವಾಗಿರುತ್ತವೆ; ಇನ್ನು ಕೆಲವು ಪಾತ್ರಗಳು ಎರಡನೇ ಭಾಗದಲ್ಲಿ ಮುಖ್ಯವಾಗಿರುತ್ತವೆ. ಅದು ಏನು ಎನ್ನುವುದು ಸಿನಿಮಾ ನೋಡಿದ ಮೇಲೆಯೇ ತಿಳಿಯುತ್ತದೆ.

ಆ್ಯಕ್ಚುಯಲಿ, ಇದು ಆ್ಯಕ್ಷನ್ ಸಿನಿಮಾ ಅಲ್ಲ. ತಾಯಿ–ಮಗನ ಭಾವನಾತ್ಮಕ ಸಂಬಂಧದ ಮೇಲೆ ಇರುವ ಸಿನಿಮಾ. ರಾಕಿಯ ಬದುಕಿನ ಕಥೆ. ನಾನು ಈ ಚಿತ್ರದ ನಾಯಕಿ ಅನ್ನುವುದಕ್ಕಿಂತ ಚಿತ್ರದಲ್ಲಿನ ಮುಖ್ಯ ಪಾತ್ರ ಎಂದು ಹೇಳಲು ಇಷ್ಟಪಡುತ್ತೇನೆ. ನಾಯಕ–ನಾಯಕಿ ಎಲ್ಲದಕ್ಕಿಂತಲೂ ಕಥೆಯ ಸನ್ನಿವೇಶಗಳು ದೊಡ್ಡವು. ನಾವೆಲ್ಲರೂ ಆ ಕಥೆಯ ಭಾಗವಾಗಿರುತ್ತೇವೆ.

◆ **ಮುಂದೆ ಕನ್ನಡ ಚಿತ್ರರಂಗದಲ್ಲಿಯೇ ಇರುವಿರಾ ಅಥವಾ ಬಾಲಿವುಡ್‌ಗೆ ಹಾರುವಿರಾ?**

ನನಗೆ ಭಾಷೆ ಒಂದು ಗಡಿ ಎಂದು ಎಂದೂ ಅನಿಸಿಲ್ಲ. ಅಂತಹ ಲಿಮಿಟೇಶನ್ ಇದ್ದಿದ್ದರೆ ನಮ್ಮ ‘ಕೆಜಿಎಫ್’ ಐದು ಭಾಷೆಗಳಲ್ಲಿ ಬರುವುದು ಸಾಧ್ಯ ಇರಲಿಲ್ಲ ಅಲ್ಲವೇ? ನನಗೆ ಒಳ್ಳೆಯ ನಿರ್ದೇಶಕ, ಒಳ್ಳೆಯ ಕಥೆ, ಒಳ್ಳೆಯ ಪಾತ್ರ ಸಿಕ್ಕರೆ ಹಿಂದಿ, ತಮಿಳು, ತೆಲುಗು ಯಾವ ಭಾಷೆಯಲ್ಲಿ ಅವಕಾಶ ಸಿಕ್ಕರೂ ನಟಿಸುತ್ತೀನಿ. ವಿದೇಶಕ್ಕೆ ಹೋದರೂ ಮನೆಗೆ ತಿರುಗಿ ಬರಲೇ ಬೇಕಲ್ವಾ? ಅಲ್ಲಿಯೇ ಕೂತುಕೊಳ್ಳಕಾಗತ್ತಾ? ನಾನು ಯಾವ ಭಾಷೆಗೆ ಹೋದರೂ ಕನ್ನಡದಲ್ಲಿ ಒಳ್ಳೆಯ ಸಿನಿಮಾ, ಪಾತ್ರ ಸಿಕ್ಕಾಗೆಲ್ಲ ನಟಿಸುತ್ತಲೇ ಇರುತ್ತೇನೆ. ■